## ಪ್ರಾರ್ಥನೆ

# ಋತಚಿನ್ಮಯೀ ಜಗನ್ಮಾತೆಗೆ

ಓಂ ಸಚ್ಚಿದಾನಂದ ತ್ರಿತ್ವಮುಖವಾದ ಪರಬ್ರಹ್ಮದಲ್ಲಿ
ಅಭವದೊತ್ತಾದೆ, ಭವದ ಬಿತ್ತಾದೆ, ಋತದ ಚಿತ್ತಾದೆ ನೀ;
ಇಳಿದು ಬಾ ಇಳೆಗೆ, ತುಂಬಿ ತಾ ಬೆಳಗೆ ಜೀವಕೇಂದ್ರದಲ್ಲಿ;
ಮತ್ತೆ ಮೂಡಿ ಬಾ ಒತ್ತಿ ನೀನೆನ್ನ ಚಿತ್ತಪೃಥಿವಿಯಲ್ಲಿ.

ಅವಿಭಕ್ತವಾಗಿ ಸುವಿಭಕ್ತದಂತೆ ತೋರುತಿರುವ ಮಾಯೆ,
ಪ್ರಕೃತಿ ಪುರುಷರಿಗೆ ನಿತ್ಯಜನ್ಮವನು ನೀಡುತಿರುವ ತಾಯೆ,
ಕಾಲ ದೇಶ ಆಕಾಶಕೋಶಗಳನೂದುತಿರುವ ಛಾಯೆ,
ಅನೃತದಲ್ಲಿ ಋತವಾಗಿ ಸಂಭವಿಸು ಸಾವು ನೋವು ಸಾಯೆ.

ಎಲ್ಲವನು ಮಾಡಿ ಎಲ್ಲರೊಳಗೂಡಿ ನೀನೆಯೆಲ್ಲವಾದೆ.
ಜ್ಯೋತಿಯಾದರೂ ತಮೋಲೀಲೆಯಲಿ ಜಡದ ಮುದ್ರೆಯಾದೆ.
ಎನಿತು ಕರೆದರೂ ಓಕೊಳ್ಳದಿರುವ ಅಚಿನ್ನಿದ್ರೆಯಾದೆ;
ಬೆಳಗಿ ನನ್ನಾತ್ಮಕಿಳಿದು ಬಾ, ತಾಯಿ, ನೀನೆ ಬ್ರಹ್ಮಬೋಧೆ.

ಹೃದಯಪದ್ಮ ತಾನರಳೆ ಕರೆವೆ ಬಾರಮ್ಮ ಬಾ, ಇಳಿದು ಬಾ!
ಮನೋದ್ವಾರ ತಾ ಬಿರಿಯೆ ಕರೆವೆ, ಜಗದಂಬೆ, ಬಾ ಇಳಿದು ಬಾ!
ಅಗ್ನಿಹಂಸ ಗರಿಗೆದರೆ ಕರೆವೆ, ಬಾ ತಾಯಿ, ಬಾ, ಇಳಿದು ಬಾ!
ಚೈತ್ಯಪುರುಷ ಯಜ್ಞಕ್ಕೆ ನೀನೆ ಅಧ್ವರ್ಯು ಬಾ, ಇಳಿದು ಬಾ!

*— ಕುವೆಂಪು ಅವರ 'ಋತಚಿನ್ಮಯೀ ಜಗನ್ಮಾತೆಗೆ' ಎಂಬ*
*ಕವನದಿಂದ ಆಯ್ದ ಭಾಗಗಳು*

## ಸೂಕ್ತಿಪ್ರಭ

## ಕುವೆಂಪು ವಾಣಿ

- ಅಜ್ಞಾನಕ್ಕಿಂತಲೂ ಜ್ಞಾನಗರ್ವವು ಘೋರತರ ತಿಮಿರ; ಜ್ಞಾನ ಗರ್ವಕ್ಕಿಂತಲೂ ಜ್ಞಾನದ ತಿರಸ್ಕಾರವು ಘೋರತಮ ತಿಮಿರ.
- ಅಲ್ಪ ನಾನು ಎಂದು ಕುಗ್ಗಿ ಮುದುಗಬೇಡವೋ:
  ಓ,ಅಲ್ಪವೆ, ಅನಂತದಿಂದ ಗುಣಿಸಿಕೊ;
  ನೀನ್ ಅನಂತವಾಗುವೆ !
- ಅವರಿವರ ಮತವಿರಲಿ,ನನ್ನ ಪಥ ನನಗಿರಲಿ.
- ಆಶ್ಚರ್ಯ ಪಡು, ಆಶ್ಚರ್ಯ ಪಡು
  ಆಶ್ಚರ್ಯ ಪಡು, ಓ ನನ್ನ ಜೀವ;
  ಆಶ್ಚರ್ಯ ಪಡುವ ಶಕ್ತಿಯನು
  ಕಳೆದುಕೊಂಡರೆ ನೀನು ನಿರ್ಜೀವ !
- ಇದುವರೆಗೂ ವಿಘ್ನಗಳೊಡನೆ ಸಂಗ್ರಾಮ ಮಾಡದೆ ಯಾರೂ ಯಾವ ಮಹಾಕಾರ್ಯವನ್ನೂ ಸಾಧಿಸಿಲ್ಲ.
- ಇಂದಿನ ಕನಸು ನಾಳೆಯ ನನಸು. ಮಹಾತ್ಮರ ಮಹಾ ಸ್ವಪ್ನಗಳಿಂದಲೆ ಭವಿಷ್ಯತ್ತಿನ ವಾಸ್ತವ ಸಿದ್ಧವಾಗುತ್ತದೆ.
- ಈಶ್ವರನ ಕೃಪೆಯೊಂದಿದ್ದರೆ ಅಮಂಗಲದಿಂದಲೂ ಮಂಗಳವೆ ಮೂಡಬಹುದು.
- ಎದ್ದರೂ ಬಿದ್ದರೂ ನನ್ನಿಯೆಡೆಗೆಡೆಬಿಡದೆ ಮೇಲೇರುವುದೆ ಗಮ್ಯ.
- ಕಾವ್ಯದಲ್ಲಾಗಲಿ ಬದುಕಿನಲ್ಲಾಗಲಿ ಪಾಪಸಮರ್ಥನೆ ಕೇಡಿಗೆ ಹೆದ್ದಾರಿ.
- ನಂಬು ನಿನ್ನನೆ ನಂಬು ಮಂತ್ರದೀಕ್ಷಿತಗೆ ಗುರಿತಪ್ಪುವೆಂದೂ.
- ಬರಿಯ ಕೂಗಿನಿಂದ ಕಾರ್ಯಸಾಧನೆಯಾಗಲಾರದು. ಜಯ ಕಾರ ಮಾಡಿದ ಮಾತ್ರದಿಂದ ಜಯಲಾಭವಾಗದು. ಬರಿಯ ಬಾಯ್ಗಲಿಗಳಾದರೆ ಸಾಲದು, ಕಯ್ಗಲಿಗಳಾಗಬೇಕು.
- ಮಣ್ಣಿನಲಿ ಬಿದ್ದು ಹೊರಳಿ ಬದುಕುವುದಕಿಂತಲೂ ಬಾನಿನಲಿ ತೇಲಿ ಹಾರಿ ಸಾಯುವುದೆ ಮೇಲು.
- ಮುಗುಳ್ನಗೆಗೆ ಮುಪ್ಪಿಲ್ಲ.
- ಮುಂದುವರಿವುದೆ ಬಾಳು; ಹಿಂದೆ ಸರಿವುದೆ ಸಾವು.
- ಮಹಿಮೆ ಕಾರ್ಯಗಳಲ್ಲಿಲ್ಲ; ಕಾರ್ಯ ಮಾಡಿಸುವ ಚಿತ್ತದಲ್ಲಿದೆ.